ಕೌನ್ಸಿಲರ್‌ಗಳು ಆ ಸಾಲ ತೀರಿದ್ದರಿಂದ ಈ ಟ್ಯಾಕ್ಸನ್ನು ಮನ್ನಾ ಮಾಡಬೇಕಾಗಿದ್ದರೆ ಸರಕಾರ ಅನುಮತಿ ಕೊಡಬೇಕೆಂದು ಕೇಳಿದರೂ ಕೂಡಾ, ಇಲ್ಲಿಯವರೆಗೂ ಅನುಮತಿ ಕೊಟ್ಟಿಲ್ಲ. ಆದುದರಿಂದ ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ನೀರಿನ ಬಗ್ಗೆ ಕೇಳಿದ್ದಾರೆ. ಸಾಲದ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ನೀರಿನ ದರದ ವಿಚಾರ ಮುನಿಸಿಪಲ್ ಖಾತೆಗೆ ಸಂಬಂಧಪಟ್ಟಿದ್ದು.

ಪ್ರಶ್ನೆ ಸಂಖ್ಯೆ ೨೬೧ (೧೩೭) ಸದಸ್ಯರು ಗೈರು ಹಾಜರಿ

ಸ್ಥಗಿತಗೊಂಡಿರುವ ಕೆಮ್ಮಣ್ಣುಗುಂಡಿ ಅದಿರು ತೆಗೆಯುವ ಕೆಲಸದ ಪುನಃ ಪ್ರಾರಂಭ

೨೬೩ (೮೦೪) ಶ್ರೀ ಬಿ.ಆರ್. ನೀಲಕಂಠಪ್ಪ (ತಿಪಟೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕಾ ಸಚಿವರು ದಯವಿಟ್ಟು ಉತ್ತರಿಸುವರೇ :—

ಅ) ಕೆಮ್ಮಣ್ಣು ಗುಂಡಿಯು ಕಬ್ಬಿಣದ ಅದಿರು ತೆಗೆಯುವ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಪುನಃ ಪ್ರಾರಂಭಿಸಲಾಗುತ್ತದೆಯೇ ?

ಇ) ಅದಿರು ಸಾಗಿಸಲು ಈಗ ಸ್ಥಗಿತಗೊಳಿಸಿರುವ ರೋಪ್‌ವೇಯನ್ನು ಮತ್ತೆ ಪ್ರಾರಂಭಿಸಲಾಗುತ್ತದೆಯೇ ?

ಶ್ರೀ ಜಿ.ಹೆಚ್. ಪಟೇಲ್ (ಮಾನ್ಯ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ಹೌದು.

ಇ) ಇಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಕೆಮ್ಮಣ್ಣು ಗುಂಡಿಯಲ್ಲಿ ಅದಿರು ತೆಗೆಯುವ ಕೆಲಸ ಸ್ಥಗಿತವಾಗಿರುತ್ತದೆ. ಇದರಿಂದ ಅಲ್ಲಿಯ ನೌಕರರ ಗತಿ ಏನಾಗಿದೆ ? ಸರಕಾರ ದವರು ಲಾಸಗಿಯವರಿಗೆ ಅದಿರನ್ನು ಸಾಗಿಸುವ ಕೆಲಸವನ್ನು ಕೊಡಲು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಒಂದು ವದಂತಿ ಇದೆ. ಅಲ್ಲಿ ಹೆಚ್ಚು ಕೆಲಸವನ್ನು ಪ್ರಾರಂಭ ಮಾಡಿ ಹೆಚ್ಚು ಅದಿರನ್ನು ತೆಗೆದು ರೋಪ್‌ವೇ ಮೂಲಕ ಸರಬರಾಜು ಮಾಡಲಿಕ್ಕೆ ಅಡಚಣೆ ಏನಿದೆ ಎಂಬುದನ್ನು ಸರಕಾರ ತಿಳಿಸಬೇಕು.

ಜಿ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಯಂತ್ರಗಳ ಮೂಲಕ ಅದಿರನ್ನು ತೆಗೆಯುವ ಕೆಲಸದ ಖರ್ಚನ್ನು ಲೆಕ್ಕ ಹಾಕಿದರೆ, ಅದರ ಬೆಲೆ ಬಹಳ ಜಾಸ್ತಿಯಾಗುತ್ತದೆ, ದುಬಾರಿಯಾಗುತ್ತದೆ. ಅದನ್ನು ಬಿಟ್ಟು, ಮ್ಯಾನ್ಯುಯಲ್ ಲೇಬರ್ ಮೂಲಕ ಅದಿರನ್ನು ತೆಗೆಯಲಿಕ್ಕೆ, ಅದರ ಕಾಸ್ಟನ್ನು ವರ್ಕ್‌ಔಟ್ ಮಾಡಿದ್ದೇವೆ. ಸೆಪ್ಟೆಂಬರ್ ತಿಂಗಳ ನಂತರ ಅಲ್ಲಿ ಮ್ಯಾನ್ಯುಯಲ್ ಆಂದರೆ ಜನಶಕ್ತಿಯ ಮೂಲಕ ಅದಿರನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜನಶಕ್ತಿಯನ್ನು ಉಪಯೋಗಿಸಿ ಅದಿರನ್ನು ತೆಗೆದರೆ ಟನ್ ಒಂದಕ್ಕೆ ೯೫ ರೂ. ಆಗುತ್ತದೆ. ಮೆಷಿನ್ ಮೂಲಕ ತೆಗೆದರೆ ಟನ್ ಒಂದಕ್ಕೆ ೧೭೫ ರೂಪಾಯಿ ಆಗುತ್ತದೆ. ಇನ್ನು ಟ್ರಾನ್ಸ್‌ಪೊರ್ಟೇಷನ್. ರೋಪ್‌ವೇ ಮೂಲಕ, ಕೆಮ್ಮಣ್ಣು ಗುಂಡಿಯಿಂದ. ತಣಿಗೆಬಯಲ್‌ಗೆ, ರೋಪ್‌ವೇ ಮೂಲಕ ತಂದು, ಅಲ್ಲಿ ಭದ್ರಾವತಿವರೆಗೆ ಲಾರಿ ಮೂಲಕ ಅದಿರನ್ನು ಸಾಗಿಸಿದರೆ ಟನ್ ಒಂದಕ್ಕೆ ೫೫ ರೂಪಾಯಿ ಖರ್ಚಾಗುತ್ತದೆ. ಕೆಮ್ಮಣ್ಣು ಗುಂಡಿಯಿಂದ ನೇರವಾಗಿ ಲಾರಿಯಲ್ಲಿ ಭದ್ರಾವತಿಗೆ ಅದಿರನ್ನು ಕಳುಹಿಸಿದರೆ ಕೇವಲ ೪೫ ರೂಪಾಯಿ ಆಗುತ್ತದೆ. ಆದುದರಿಂದ ಅಲ್ಲಿ ಕಷ್ಟವಾದರೂ ಸಹ, ಖರ್ಚು ಮತ್ತು ತಗಲತಕ್ಕಂಥ ಪೆಚ್ಚಿನ ಆಧಾರದ ಮೇಲೆ, ಮ್ಯಾನ್ಯುಯಲ್ ಲೇಬರ್ ಉಪಯೋಗ ಮಾಡಿ ಅದಿರನ್ನು ತೆಗೆದು ಅಲ್ಲಿಂದ ನೇರವಾಗಿ ಭದ್ರಾವತಿಗೆ ರೋಪ್‌ವೇ ಉಪಯೋಗಿಸದೇ ಟ್ರಾನ್ಸ್‌ಪೋರ್ಟ್ ಮಾಡಿದರೆ ಸೋವಿ ಆಗುತ್ತದೆ. ಆದುದರಿಂದ ಒಂದೆರಡು ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿ ಆ ರೀತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.